ಸಂಖ್ಯೆ: ಡಿಟಿಇ/3/ಎಲ್‌ಆರ್‌ಡಿಸಿ/2012-13 | 383 ದಿನಾಂಕ:14-06-2013.

ಸುತ್ತೋಲೆ

ವಿಷಯ: ಕ್ರೀಡಾ ನಿಧಿಗೆ ವಂತಿಕೆಯನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂ: ಡಿಟಿಇ/3/ಎಲ್‌ಆರ್‌ಡಿಸಿ/2012-13-
,ದಿನಾಂಕ:29-01-2013 ಮತ್ತು 29-04-2013

- - - - -

ಉಲ್ಲೇಖದ ಈ ಕಛೇರಿ ಸುತ್ತೋಲೆ ಸಂ: ಡಿಟಿಇ/3/ಎಲ್‌ಆರ್‌ಡಿಸಿ/2012-13 ದಿನಾಂಕ: 29-01-2013 ಸುತ್ತೋಲೆಯಲ್ಲಿ ಕ್ರೀಡಾ ನಿಧಿಗೆ ನೀಡಬೇಕಾದ ವಂತಿಕೆಯನ್ನು ಬೇಡಿಕೆ / ಹುಂಡಿಗಳ ಮುಖಾಂತರ ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿತ್ತು. ಮತ್ತೆ ದಿನಾಂಕ: 29-04-2013ರ ಸುತ್ತೋಲೆಯಲ್ಲಿ 2006-07 ರಿಂದ 2012-13ರ ವರೆಗೆ ಯಾವ ಯಾವ ವರ್ಷದ ವಂತಿಕೆಯನ್ನು ಸಲ್ಲಿಸಿಲ್ಲವೋ ಸದರಿ ವರ್ಷಗಳ ವಂತಿಕೆಯ ಹಣವನ್ನು ಸಲ್ಲಿಸಲು ಸಹ ಸೂಚಿಸಲಾಗಿತ್ತು. 2006-07ನೇ ಸಾಲಿನಿಂದ 2012-13ನೇ ಸಾಲಿನವರೆಗೆ ಉಲ್ಲೇಖದ ಪತ್ರದಲ್ಲಿ ಸೂಚಿಸಿದ ನಮೂನೆಯಲ್ಲಿ ವಿವರವಾದ ಮಾಹಿತಿಯನ್ನು ನೀಡಲು ಸಹ ತಿಳಿಸಲಾಗಿತ್ತು. ಆದರೆ ಕೆಲವೇ ಪಾಲಿಟೆಕ್ನಿಕ್‌ಗಳು ಮಾತ್ರ ಕ್ರೀಡಾ ವಂತಿಕೆ ಮತ್ತು ನಮೂನೆಯಲ್ಲಿ ಕೋರಿರುವ ಮಾಹಿತಿಯನ್ನು ಕಳುಹಿಸಿದ್ದು ಉಳಿದ ಪಾಲಿಟೆಕ್ನಿಕ್‌ಗಳಿಂದ ಇಲ್ಲಿಯವರೆಗೂ ವಂತಿಕೆಯ ಹಣ ಬಂದಿರುವುದಿಲ್ಲ ಮತ್ತು ವಿವರವಾದ ಮಾಹಿತಿಯನ್ನು ಸಹ ಸಲ್ಲಿಸಿರುವುದಿಲ್ಲ. ಸರ್ಕಾರಿ ಆದೇಶದಲ್ಲಿ ಮತ್ತು ಈ ಕಛೇರಿ ಸುತ್ತೋಲೆಯಲ್ಲಿ ತಿಳಿಸಿದರೂ ಸಹ ಕ್ರೀಡಾನಿಧಿಗೆ ವಂತಿಕೆ ಹಣವನ್ನು ಸಲ್ಲಿಸದಿರುವುದು ಮತ್ತು ವಿವರವಾದ ಮಾಹಿತಿಯನ್ನು ನೀಡದಿರುವುದು ತುಂಬ ವಿಷಾದನೀಯ ಮತ್ತು ಗಂಭೀರವಾದ ವಿಷಯವಾಗಿರುತ್ತದೆ. ಆದ ಪ್ರಯುಕ್ತ ಉಲ್ಲೇಖದ ಪತ್ರದಲ್ಲಿ ಸೂಚಿಸಿರುವಂತೆ ಕ್ರೀಡಾ ವಂತಿಕೆಯನ್ನು ಮತ್ತು ವಂತಿಕೆಗೆ ಸಂಬಂಧಿಸಿದಂತೆ 2006-2007 ರಿಂದ 2012-13ನೇ ಸಾಲಿನವರೆಗಿನ ವಿವರವಾದ ಮಾಹಿತಿಯನ್ನು ಸಲ್ಲಿಸಲು ಮತ್ತೊಮ್ಮೆ ಸೂಚಿಸಲಾಗಿದೆ.

19/6/13

ಜಂಟಿ ನಿರ್ದೇಶಕರು (ಸಿಡಿಸಿ).

ಇವರಿಗೆ,

1. ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ ಸೂಕ್ತ ಕ್ರಮಕ್ಕಾಗಿ.
2. ಇ. ಆಡಳಿತ ವಿಭಾಗಕ್ಕೆ ಸೂಕ್ತ ಕ್ರಮಕ್ಕಾಗಿ.